ಆದರೆ ಹೌಸಿಂಗ್ ಬೋರ್ಡ್‌ನವರು ಕಾರ್ಯಕ್ರಮವನ್ನು ಸರಿಯಾಗಿ ತೆಗೆದುಕೊಳ್ಳಲಿಲ್ಲ. ಈಗ ಅದನ್ನು ಡೀ-ಲಿಂಕ್ ಮಾಡಿಕೊಂಡು ಡೆಪ್ಯೂಟಿ ಕಮೀಷನರ್‌ಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಮಾನ್ಯ ಜಾಲಪ್ಪನವರು ಗೌರಿಬಿದನೂರಿನಲ್ಲಿ ಸ್ವಲ್ಪ ತೊಂದರೆ ಆಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ತಾರತಮ್ಯ ಆಗದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಆಗುವಂತೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ . Already we are doing it. If it has not started yet, we have already given instructions. It will be taken up. ಇನ್ನು ಡಾ।। ಅಂಬೇಡ್ಕರ್ ಹೌಸಿಂಗ್ ಬಗ್ಗೆ ಕೂಡ ಸುಮಾರು 25 ಸಾವಿರ ಮನೆಗಳನ್ನು ಕೊಡಬೇಕು ಎಂದು ಸರ್ಕಾರದಿಂದ 15 ಕೋಟಿ ರೂಪಾಯಿಗಳನ್ನು ಹೌಸಿಂಗ್ ಬೋರ್ಡ್‌ಗೆ ಕೊಟ್ಟರೆ ಅವರು ಅದನ್ನು ಉಪಯೋಗ ಮಾಡಲಿಲ್ಲ. ಅದನ್ನು ಹೌಸಿಂಗ್ ಬೋರ್ಡ್‌ನವರು ಡೈವರ್ಟ್ ಮಾಡಿಕೊಂಡು ಯಲಹಂಕದಲ್ಲಿ ಮನೆಗಳ ಕಾರ್ಯಕ್ರಮಕ್ಕೆ ಕೊಟ್ಟಿದ್ದಾರೆ. ಇಂಥ ಡೈವರ್ಷನ್ ಇನ್ನು ಮುಂದೆ ನಡೆಯುವುದಕ್ಕೆ ಬಿಡುವುದಿಲ್ಲ. ಇದನ್ನೂ ಕೂಡ 25 ಸಾವಿರ ಮನೆಗಳನ್ನು ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂನಲ್ಲಿ ಡಾ।। ಅಂಬೇಡ್ಕರ್ ಯೋಜನೆಯನ್ನು ಕೂಡ ನಾವು ಕೈಗೆತ್ತಿಕೊಳ್ಳುತ್ತೇವೆ. ಇನ್ನು ಟ್ಯಾಪರ್ಸ್ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ತಾವು ಹೇಳಿದ್ದೀರಿ. ನಾವು ಅವರ ಜೊತೆಯಲ್ಲಿ ಮಾತನಾಡಿಕೊಂಡು ಅದರ ಬಗ್ಗೆ ಏನು ಪ್ರೊಡಕ್ಟೀವ್ ಇನ್‌ಸೆಂಟಿವ್ ಸ್ಕೀಮ್ ಅದನ್ನು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಕೊಟ್ಟರೆ ಸಾಲದು, ಎಲ್ಲಾ ರೈತರಿಗೆ ಕೊಡಬೇಕು ಎಂದು ಹೇಳಿದರು. ಶ್ರೀ ಯಡಿಯೂರಪ್ಪ ಮತ್ತು ಸದಸ್ಯರುಗಳು ಇದರ ಬಗ್ಗೆ ವಾದ ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮುಂದೆ ನಡೆಯುತ್ತದೆ. ಆಗ ನಾವು, ಉತ್ತರ ಕೊಡುತ್ತೇವೆ. Minor irrigation we have provided more money.

ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ ಮರೆತು ಬಿಟ್ಟೆ, ಬಹಳ ಸಮಯದಿಂದ ನಮ್ಮ ಶಾಸಕರಿಗೆ ಒಂದು ಆಶ್ವಾಸನೆಯನ್ನು ಕೊಟ್ಟು ಬಿಟ್ಟಿದ್ದೇವೆ. ಏನು ಎಂದರೆ 40 ಲಕ್ಷ ರೂಪಾಯಿಗಳನ್ನು ಅವರವರ ಕ್ಷೇತ್ರಕ್ಕೆ ಮೂರು ವರ್ಷಕ್ಕೆ ನಾವು ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಆದರೆ ಅದನ್ನು ನಡೆಸುವುದಕ್ಕೆ ಆಗಲಿಲ್ಲ. ಆದರೆ ಈ ಎರಡು ವರ್ಷಕ್ಕೆ ಶಾಸಕರ ಕ್ಷೇತ್ರಕ್ಕೆ ಒಂದೊಂದು ವರ್ಷಕ್ಕೆ 20ಲಕ್ಷ ರೂಪಾಯಿಗಳ ಪ್ರಕಾರ ನಾವು ವಿಶೇಷವಾದಂತಹ ಕಾರ್ಯಕ್ರಮವನ್ನು ಅಂದರೆ ರಸ್ತೆ, ಸೇತುವೆಗಳ ಬಗ್ಗೆ ತೆಗೆದುಕೊಳ್ಳುತ್ತೇವೆ. 1993-94ರಿಂದ ಇದನ್ನು ಪ್ರಾರಂಭ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:- ಬರಬೇಕಾಗಿದ್ದ 500 ಕೋಟಿ ರೂಪಾಯಿಗಳನ್ನು ವಸೂಲು ಮಾಡಲಿಲ್ಲ. ಪಿ.ಡಬ್ಲ್ಯೂ.ಡಿ.ಯಲ್ಲಿ ಒಂದಾಣೆಯ ಕೆಲಸವೂ ಮಾಡುತ್ತಿಲ್ಲ. ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ವಾಕ್‌ಔಟ್ ಮಾಡಿದರು.)

ಅಧ್ಯಕ್ಷರು:- ಸದನದ ಕಲಾಪವನ್ನು 1 ಗಂಟೆ ಕಾಲ ಮುಂದೂಡಿ 3.30ಕ್ಕೆ ಪುನಃ ಪ್ರಾರಂಭಿಸಲಾಗುವುದು.

(ಸದನವು 3.45 ಗಂಟೆಗೆ ಪುನಃ ಸಮಾವೇಶಗೊಂಡಿತು)

ಅಧ್ಯಕ್ಷರು:- ಶ್ರೀ ವಿ. ಎಸ್. ಕೌಜಲಗಿ, ಅವರು ಪೀಠವನ್ನು ಅಲಂಕರಿಸಿದರು.

ಪ್ರಶ್ನೋತ್ತರಗಳು

ಅಧ್ಯಕ್ಷರು:- ಈಗ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. ಶ್ರೀ ಮಲ್ಲಾರಿಗೌಡ, ಎಸ್. ಪಾಟೀಲರ ಪರವಾಗಿ ಶ್ರೀ ಎಂ.ಎಸ್. ಆತ್ಮಾನಂದ ಅವರು ಪ್ರಶ್ನೆ ಸಂಖ್ಯೆ 1859ನ್ನು ಕೇಳಬಹುದು.